**ದಿನಾಂಕಃ 11-03-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ವೈ.ಹೆಚ್.ಕೆ. ವಕೀಲರಿಂದಃ**

ನನಗೆ 65-66 ವರ್ಷ ವಯಸ್ಸಿರಬಹುದು. ನಾನು ಕೋಡಿಯಾಲ ಹೋಸಪೇಟೆಯ ವಿಪಿಸಿ ನಂ.50/145 ಆಸ್ತಿಯಲ್ಲಿ ಇರುತ್ತೇನೆ. ಅದು ದಾವಾ ಶೆಡ್ಯೂಲ್ ನ 3 ನೇ ಆಸ್ತಿ ಇರುತ್ತದೆ. ನಮ್ಮ ತಂದೆ ಸೇರಿ 4 ಜನ ಅಣ್ಣ ತಮ್ಮಂದಿರು. ಅವರು ಎಂದರೆ ಖಾಸಿಂ ಸಾಬ್, ಜಮಲ್ ಸಾಬ್, ಕರೀಮ್ ಸಾಬ್, ಚಮನ್ ಸಾಬ್ ಎನ್ನುವ ಅಣ್ಣ ತಮ್ಮಂದಿರು ಇರುತ್ತಾರೆ. ದಾವಾ ಆಸ್ತಿಗಳು ನಮ್ಮ ಅಜ್ಜನ ಕಾಲದಿಂದಲೂ ಬಂದಿವೆ ಎಂದರೆ ಸರಿಯಲ್ಲ. ನಮ್ಮ ತಂದೆ ಖರೀದಿಸಿದ್ದಾರೆ. ನಮ್ಮ ತಂದೆಗೆ ಅವರ ತಂದೆಯಿಂದ ಜಮೀನು ಬಂದಿವೆ. ನನ್ನ ತಂದೆ 1976 ರಲ್ಲಿ ಕೊಡಿಯಾಲ ಹೊಸಪೇಟೆಯಲ್ಲಿ ತೀರಿಕೊಂಡಿದ್ದಾರೆ. ದಾವಾ ಆಸ್ತಿಗಳು ನಮ್ಮ ತಂದೆ ಜೀವಂತ ಇದ್ದಾಗ ಅವರ ಹೆಸರಿನಲ್ಲಿ ಆಗಿದ್ದವು. ನಮ್ಮ ತಂದೆಗೆ ನಾನು ಮೊದಲನೇ ಮಗನಿರುತ್ತೇನೆ. ನನ್ನ ಹಿಂದೆ ಶಹಜಾದ್ ಬೀ, ಅದಾದ ನಂತರ ಶೌಕತ್ ಅಲಿ, ನಂತರ ಜಮೀಲಾ ಬೀ, ಕಲೀಲ, ಹಾಗೂ ಶಕೀರಾ ಬಾನು ಶಂಶಾದ್ ಬೀ ಇವರು ಇರುತ್ತಾರೆ. ಕುಟುಂಬದ ಹಿರಿಯ ಸದಸ್ಯನಾಗಿ ಮನೆ ವ್ಯವಹಾರವನ್ನು ನಾನೇ ಮಾಡುತ್ತೇನೆ ಎಂದರೆ ಸರಿ. ವಾದಿ ಶಂಶಾದ್ ಬೀ ಇವರ ಮದುವೆ ನನ್ನ ತಂದೆ ತೀರಿಕೊಂಡ 2 ವರ್ಷದ ನಂತರ ಮದುವೆ ಆಗಿದೆ. ನನ್ನ ತಂದೆ ಇದ್ದಾಗಲೇ ಅವರ ಮದುವೆ ಆಗಿದೆ ಎಂದರೆ ಸರಿಯಲ್ಲ. ಮದುವೆ ಆದ ಒಂದು ವರ್ಷದ ನಂತರ ಅವರು ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ.

2. ಶೆಡ್ಯೂಲ್ ಬ ದಲ್ಲಿ 2 ಆಸ್ತಿಗಳು ಇದೆ ಎಂದರೆ ಸರಿಯಲ್ಲ. ಅದು ಎರಡು ಒಂದೇ ಸರ್ವೇ ನಂಬರಿನಲ್ಲಿ ಬರುತ್ತದೆ. ಸರ್ವೆ ನಂ.31 ರಲ್ಲಿ ಒಟ್ಟು 25 ಗುಂಟೆ ಇದ್ದು ಅದರಲ್ಲಿ 4 ಗುಂಟೆ ಕೋರ್ಟ ಕರಾಬು ಇದೆ. 21 ಗುಂಟೆಯಲ್ಲಿ 3 ಸೈಟುಗಳನ್ನು ಮಾಡಿದ್ದೇನೆ. ಆ ಮೂರು ಸೈಟುಗಳ ನಂಬರು ಅವುಗಳ ಪ್ಲಾಟ್ ನಂ. 10 ರಿಂದ 12 ಇರುತ್ತವೆ. ಪ್ಲಾಟ್ ನಂ.10 ಇದು 9 ಗುಂಟೆ 10 ಆಣೆ ಇದೆ. ಪ್ಲಾಟ್ ನಂ.11 ಇದು 5 ಗುಂಟೆ. ಪ್ಲಾಟ್ ನಂ.12 ಇದು 6 ಗುಂಟೆ 6 ಆಣೆ ಇರುತ್ತದೆ. ಹಳೇ ಮಸೂತಿ ಹತ್ತಿರ ಒಂದು ಖಾಲಿ ಜಾಗ ಇತ್ತು ಈಗ ಅದರಲ್ಲಿ ಭಾಗ ಆದ ನಂತರ ಮನೆ ಕಟ್ಟಿದ್ದೇವೆ. ಅದರ ಒಟ್ಟು ಕ್ಷೇತ್ರ 45 X 23 ಅಡಿ ಇರುತ್ತದೆ. ಇವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. ಇದಲ್ಲದೇ ಸರ್ವೆ ನಂ. 31/ಅ 1 ಇದರಲ್ಲಿ ಎ 25 ಗುಂಟೆ ಇನ್ನೊಂದು ಆಸ್ತಿ ಇದೆ ಎಂದರೆ ಸರಿಯಲ್ಲ.

ಪ್ಲಾಟ್ ನಂ.10 ರಲ್ಲಿ ಅದರ ವಿಪಿಸಿ ನಂ.702/10 ಎ ಇರುತ್ತದೆ. ಅದು 2 ಗುಂಟೆಯನ್ನು ಇರುತ್ತದೆ. ಪ್ಲಾಟ್ ನಂ.11 ನ್ನು ಗುಡ್ಡಪ್ಪ ಇವರಿಗೆ ಮಾರಾಟ ಮಾಡಿದ್ದೇವೆ. ಗುಡ್ಡಪ್ಪ ಇವರು ಇಮಾಮ್ ಸಾಬ್ ಇವರಿಗೆ ಮರು ಮಾರಾಟ ಮಾಡಿದ್ದಾರೆ. ಪ್ಲಾಟ್ ನಂ.12 ರಲ್ಲಿ ಒಟ್ಟು 3 ಜನಕ್ಕೆ ಆ ಆಸ್ತಿಯನ್ನು ಮಾರಾಟ ಮಾಡಿದ್ದೇವೆ. ಬೀಮಪ್ಪ ನಿಂಗಪ್ಪ ನೆಲ್ಲೂರು, ಲೆಮನ್ ದಾಸಿಮಪ್ಪ ಮಾಸಣಗಿ, ಮುಲ್ಲಾ ಎನ್ನುವವರಿಗೆ ಮಾರಿದ್ದೇವೆ.

3. ಶಂಶಾದ್ ಬೀ ಇವರಿಗೆ ಪ್ಲಾಟ್ ನಂ.10 ರಲ್ಲಿ 5 ಗುಂಟೆಯನ್ನು ಕೊಟ್ಟಿದ್ದೇವೆ. ಅದನ್ನು ವಾದಿಯ ಹೆಸರಿಗೆ ಕೊಟ್ಟಿದ್ದೇವೆ. ಪ್ಲಾಟ್ ನಂ.10 ರಿಂದ 12 ಇವುಗಳನ್ನು 1977 ರಿಂದ 1985 ರವರೆಗೆ ಮಾರಾಟ ಮಾಡಿದ್ದೇವೆ. ಶಂಶಾದ್ ಬೀ ಗೆ 1987 ರಲ್ಲಿ ಕೊಟ್ಟಿದ್ದೇವೆ. ಅದಕ್ಕೆ ನಮ್ಮ ಕುಟುಂಬದ ಎಲ್ಲಾ ಸದಸ್ಯರು ಸಹಿ ಮಾಡಿದ್ದೇವೆ. ಖರೀದಿ ಪತ್ರಗಳಿಗೆ ನಮ್ಮ ತಂಗಿಯರು ಸಹಿ ಮಾಡಿಲ್ಲ. ನನ್ನ ತಂಗಿಗೆ ಆಸ್ತಿಯನ್ನು ಕೊಡುವ ಕಾಲಕ್ಕೆ ನನ್ನ ತಂಗಿ ಪಂಚಾಯಿತಿಯಲ್ಲಿ ಖಾತೆ ಬದಲಾವಣೆ ಮಾಡಿಸಿಕೊಟ್ಟರೆ ಸಾಲ ಸಿಗುವುದಿಲ್ಲ ಆದ್ದರಿಂದ ನನಗೆ ಬರಬೇಕಾದ ಆಸ್ತಿಯನ್ನು ನನ್ನ ಗಂಡನ ಹೆಸರಿನಲ್ಲಿ ಕ್ರಯ ಪತ್ರ ಮಾಡಿಸಿಕೊಟ್ಟರೆ ಮನೆ ಕಟ್ಟಿಸಿಕೊಳ್ಳುವಾಗ ಸಾಲ ಸಿಗುತ್ತದೆ ಎಂದು ಹೇಳಿದ್ದರಿಂದ ಆ ರೀತಿ ಬರೆದುಕೊಟ್ಟಿದ್ದೇವೆ. ಈ ವಿಷಯವನ್ನು ಕ್ರಯ ಪತ್ರದಲ್ಲಿ ಬರೆಸಲು ಯಾವುದೇ ತೊಂದರೆ ಇರಲಿಲ್ಲ. ವಾದಿಯ ಗಂಡ ಪ್ಲಾಟ್ ನಂ.10 ರಲ್ಲಿ 5 ಗುಟೆಯನ್ನು ತನ್ನ ದುಡಿದ ದುಡ್ಡಿನಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಯಾವುದೇ ಸಂಚುಕಾರ ಪತ್ರ ಆಗಿರಲಿಲ್ಲ.

4. ದಿನಾಂಕ 28-06-1987 ರಂದು ನಮ್ಮ ಮತ್ತು ವಾದಿಯ ಗಂಡನ ಮದ್ಯೆ ಒಂದು ಸಂಚುಕಾರ ಪತ್ರ ಆಗಿತ್ತು ಎಂದರೆ ಸರಿಯಲ್ಲ. ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಉರ್ದು ಬಾಷೆಯನ್ನು ಒದಿಲ್ಲ. ನನ್ನ ಅಣ್ಣ ತಮ್ಮಂದಿರು ಒದಿಲ್ಲ. ಉರ್ದುದಲ್ಲಿರುವ ಸಹಿ ನನ್ನ ತಮ್ಮ ಶೌಕತ್ ಅಲಿಯದು ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಿಪಿ -38 ಎಂದು ಗುರುತಿಸಲಾಯಿತು. ಸಂಚುಕಾರ ಪತ್ರ ಬರೆದುಕೊಟ್ಟ ನಂತರ ನಾವು ವಾದಿಯ ಗಂಡನಿಗೆ ಖರೀದಿ ಪತ್ರ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ. ದಾವೆಯಲ್ಲಿ ತೋರಿಸಿರುವ ಆಸ್ತಿಗಳು ಮಾರಾಟ ಮಾಡಿ ಉಳಿದ ಆಸ್ತಿಗಳು ಎಂದರೆ ಸರಿಯಲ್ಲ. ಪ್ಲಾಟ್ ನಂ.12 ರಲ್ಲಿ ನಾನು, ನನ್ನ ತಮ್ಮ ಶೌಕತ್ ಅಲಿ ಮತ್ತು ಇನ್ನೊಬ್ಬ ತಮ್ಮ ಹಂಚಿಕೊಂಡಿದ್ದೇವೆ. 50/145 ಇದು 45 ಅಡಿ

ಉದ್ದ 25 ಅಡಿ ಅಗಲ ಈ ಆಸ್ತಿ ಉಳಿದಿತ್ತು ಅದನ್ನು ನಾವು ಅಣ್ಣ ತಮ್ಮಂದಿರು ಹಂಚಿಕೊಂಡಿದ್ದೇವೆ. ತಂಗಿಯರಿಗೆ ಪ್ಲಾಟ್ ನಂ.10 ರಲ್ಲಿ 62 ಅಡಿ ಉದ್ದ 35 ಅಡಿ ಅಗಲ ಆಸ್ತಿಯನ್ನು ಕೊಟ್ಟಿದ್ದೇವೆ.

5. ಅಮೃತ ವರ್ಷಿಣಿ ಶಾಲೆಯ ಪಕ್ಕ ಒಂದು ತೋಟ ಇದೆ ಅದರಲ್ಲಿ ಒಂದು ಮನೆ ಇದೆ ಎಂದರೆ ಸರಿ. ಅಲ್ಲಿ ತೆಂಗಿನ ಗಿಡಗಳನ್ನು ನೆಟ್ಟಿದ್ದೇವೆ ಎಂದರೆ ಸರಿ. ಅದು ಯಾರ ಹೆಸರಿನಲ್ಲಿಯೂ ಇಲ್ಲ ಕೋರ್ಟ ಕರಾಬು ಇರುತ್ತದೆ. 1976 ರಲ್ಲಿ ಎಲ್ಲಾ ಅಣ್ಣ ತಮ್ಮಂದಿರು ಹಾಗೂ ಅಕ್ಕ ತಂಗಿಯರು ವಾಟ್ನಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಪಿಸಿ ನಂ.702/12 ಎ ದಲ್ಲಿ ಈಗ ವಾದಿ, ಆಕೆಯ ಅಳಿಯ, ಮಗಳು ಇರುತ್ತಾಳೆ ಎಂದರೆ ಸರಿಯಲ್ಲ. ಅವರ ಸ್ವಂತ ಮನೆಯಲ್ಲಿ ವಾಸವಾಗಿದ್ದಾರೆ. ಪ್ಲಾಟ್ ನಂಬರ 10 ರಲ್ಲಿ 5 ಗುಂಟೆ ಯಲ್ಲಿ ವಾದಿ ಮನೆ ಕಟ್ಟಿಸಿದ್ದು ಅದರಲ್ಲಿ ವಾಸವಾಗಿದ್ದಾಳೆ. ಅವಳು ವಿಪಿಸಿ ನಂ.702/12 ಎ ದಲ್ಲಿ ವಾಸವಾಗಿದ್ದಾಳೆ ಎನ್ನುವುದು ಸರಿಯಲ್ಲ. ವಾದಿಯು ಪ್ಲಾಟ್ ನಂ.12 ರಲ್ಲಿರುವ ಮನೆಯಲ್ಲಿ ನಮ್ಮ ತಂದೆ ತಾಯಿ ಕಾಲದಿಂದಲೂ ವಾಸವಾಗಿದ್ದಾಳೆ ಎಂದರೆ ಸರಿಯಲ್ಲ. ಆ ಪ್ಲಾಟ್ ನಂ.12 ರಲ್ಲಿ ನಮ್ಮ ತಮ್ಮ ಕಲೀಲ್ ಇತನಿಗೆ ಭಾಗ ಆಗುವ ಮೊದಲೇ ಮನೆ ಕಟ್ಟಿಕೊಟ್ಟಿದ್ದೇವೆ.

6. ನನ್ನ ತಂದೆ ತೀರಿಕೊಂಡಾಗ ಕಲೀಲ್ ಚಿಕ್ಕವನು ಇದ್ದನು ಆತನನ್ನು ವಾದಿ ಜೋಪಾನ ಮಾಡಿದ್ದಳು ಎಂದರೆ ಸರಿಯಲ್ಲ. ಕಲೀಲ್ ಇತನ ಮದುವೆಯನ್ನು ವಾದಿ ನಿಂತು ಮಾಡಿದ್ದಾಳೆ ಎಂದರೆ ಸರಿಯಲ್ಲ. ನಾವು ಮಾಡಿದ್ದೇವೆ. ಅವರು ಕಲೀಲ ಇತನಿಗೆ ಹಣ ಕೊಟ್ಟು ವ್ಯಾಪಾರ ಮಾಡಲು ಸಹಾಯ ಮಾಡಿದ್ದರು ಎಂದರೆ ಗೊತ್ತಿಲ್ಲ. ಈ ವಿಷಯಗಳು ನನಗೆ ಗೊತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನನ್ನ ಹೆಸರಿನಲ್ಲಿ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದಾಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಕಲೀಲ ವಾದಿಗೆ ಆಸ್ತಿ ಕೊಡಬಾರದು ಮತ್ತು ಮನೆಯಿಂದ ಹೊರಗೆ ಹಾಕಬೇಕು ಎಂದು ಆ ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಕಲೀಲ ಸಾಬನ ಕೇಸಿನಲ್ಲಿ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ವಾದಿ ಹಾಜರಾಗಿರಲಿಲ್ಲ ಮತ್ತು ತಕರಾರು ಹಾಕಿರಲಿಲ್ಲ ಎಂದರೆ ಸರಿಯಲ್ಲ.

7. ನಿ ಪಿ -37 ರಲ್ಲಿನ ಒಂದು ಫೋಟೋದಲ್ಲಿ ಇರುವ ಮನೆಯಲ್ಲಿ ವಾದಿ

ವಾಸವಾಗಿದ್ದಾಳೆ ಎಂದರೆ ಸರಿಯಲ್ಲ. ಆ ಪೋಟೋವನ್ನು ನಿ ಪಿ -37 ಎ ಎಂದು ಗುರುತಿಸಲಾಯಿತು. ನಾನು ಒಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ 2 ನೇ ಆಸ್ತಿ ವಿಪಿಸಿ ನಂ.218 ಇದು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಜೆ.ವಿ.ಕುಲಕರ್ಣಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.